ಸಾಕ್ಷಿಯನ್ನು ದಿನಾಂಕ 09.02.2024 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀಸವಾಲುಃ ಎದುರುದಾರರ ಪರ ಶ್ರೀ.ಎಸ್.ಆರ್. ವಕೀಲರಿಂದಃ**

ಎದುರುದಾರರು ನನಗೆ ನೋಟೀಸನ್ನು ನೀಡಿದ್ದರು ಎಂದರೆ ಸರಿ. ಆ ನೋಟೀಸಿನಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಲೈನು ಹಾದು ಹೋಗುತ್ತದೆ ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ನಾವು, ರೈತ ಸಂಘದ ಪದಾಧಿಕಾರಿಗಳು ಮತ್ತು ಅಕ್ಕಪಕ್ಕದ ರೈತರು ಹೆಚ್ಚಿನ ಪರಿಹಾರ ಕೋರಿ ಜಿಲ್ಲಾಧಿಕಾರಿಗೆ ಅರ್ಜಿಯನ್ನು ನೀಡಿದ್ದೆವು ಎಂದರೆ ಸರಿಯಲ್ಲ. ಅರ್ಜಯನ್ನು ನೀಡಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಅರ್ಜಿಯ ಮೇಲೆ ಜಿಲ್ಲಾಧಿಕಾರಿಯವರು ಪರಿಹಾರವನ್ನು ಪರಿಷ್ಕರಿಸಿದ ನಂತರ ಪರಿಷ್ಕೃತ ಪರಿಹಾರವನ್ನು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಚೆಕ್ ಮೂಲಕ ನನಗೆ 2014 ರಲ್ಲಿ ಪರಿಹಾರದ ಹಣವನ್ನು ನೀಡಿರುತ್ತಾರೆ ಎಂದರೆ ಸರಿ. ಯಾವ ದಿನಾಂಕದಂದು ಮತ್ತು ಎಷ್ಟು ಮೊತ್ತದ ಚೆಕ್ಕನ್ನು ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ದಿನಾಂಕ ನೆನಪಿಲ್ಲ, ಆದರೆ ರೂ.3,70,000 ಪರಿಹಾರದ ಚೆಕ್ಕನ್ನು ಪಡೆದುಕೊಂಡಿರುತ್ತೇನೆಂದು ನುಡಿಯುತ್ತಾರೆ. ಜಮೀನಿನ ಪಹಣಿ ಮತ್ತು ಮ್ಯುಟೇಷನ್ ಈಗಲೂ ಸಹ ನನ್ನ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಜಮೀನಿನಲ್ಲಿ ಈಗಲೂ ಸಹ ಸಂಪೂರ್ಣವಾಗಿ ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿ. ಆದರಿಂದ ಉಳುಮೆಯನ್ನು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನಿನಲ್ಲಿ ನಾನು ಉಳುಮೆ ಮಾಡುತ್ತಿರುವುದರಿಂದ ಪಹಣಿಯ ಬೆಳೆ ಕಲಂ ನಲ್ಲಿ ಬೆಳೆ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರವನ್ನು ಪಡೆದುಕೊಳ್ಳಲು ನಾನು ಯಾವುದೇ ಸೂಕ್ತವಾದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನದು ಖುಷ್ಕಿ ಜಮೀನು ಎಂದರೆ ಸರಿ. ನನ್ನ ಜಮೀನಿನಲ್ಲಿ ರಾಗಿ, ತೊಗರಿ, ಶೇಂಗಾ ಬೆಳೆಗಳನ್ನು ಬಿಟ್ಟು ಬೇರೆ ಬೆಳೆಗಳನ್ನು ಬೆಳೆಯುವುದಿಲ್ಲ ಎಂದರೆ ಸರಿ. ಸದರಿ ಬೆಳೆಗಳನ್ನು ಹೊರತುಪಡಿಸಿ ನನ್ನ ಜಮೀನಿನಲ್ಲಿ ಬೇರೆ ಬೆಳೆಗಳು ಇಲ್ಲ ಎಂದರೆ ಸಾಕ್ಷಿಯು

ಮರಗಳು ಇರುತ್ತವೆ ಎಂದು ನುಡಿಯುತ್ತಾರೆ. ನಿಪಿ 3 ರಲ್ಲಿ ಮರಗಳ ನಮೂದು ಇಲ್ಲ ಎಂದರೆ ಸರಿಯಲ್ಲ. ಮರಗಳು ಇರುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ. ಪಂಚನಾಮೆಯಲ್ಲಿಯೂ ಸಹ ಮರಗಳ ನಮೂದು ಇಲ್ಲದೇ ಇರುವುದರಿಂದ ನನ್ನ ಜಮೀನಿನಲ್ಲಿ ಯಾವುದೇ ಮರಗಳು ಇರಲಿಲ್ಲ ಎಂದರೆ ಸರಿಯಲ್ಲ.

ನನ್ನ ಜಮೀನಿನಲ್ಲಿ ಎರಡು ಮರಗಳಿದ್ದವು ಮತ್ತು ಅವುಗಳಿದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಬರೆಸಿದ್ದೇನೆ ಎಂದರೆ ಸರಿಯಲ್ಲ. ತೊಗರಿ ಮತ್ತು ಶೇಂಗಾ ಬೆಳೆಗಳಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ.

ಎದುರುದಾರರು ರೂ.5,34,490 ಗಳನ್ನು ಜಮೀನು ಮತ್ತು ಸವಕಳಿಗೆ ಪರಿಹಾರವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರಿಂದ ನೋಟೀಸನ್ನು ಪಡೆದುಕೊಂಡಾಗ ಮತ್ತು ಪರಿಹಾರದ ಮೊತ್ತವನ್ನು ಪಡೆದುಕೊಂಡಾಗ ನನ್ನ ಜಮೀನಿನಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆಗ ದಾಖಲಾತಿಗಳನ್ನು ಹಾಜರುಪಡಿಸಲು ಯಾವುದೇ ಸಮಸ್ಯೆ ಇರಲಿಲ್ಲ ಎಂದರೆ ಸರಿ. ಲೈನನ್ನು ಎಳೆಯಲು ಮತ್ತು ಟವರ್ ನ್ನು ಹಾಕಲು ನನ್ನ ಅನುಮತಿ ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ನಾನು ಒಪ್ಪಿ ಪರಿಹಾರದ ಮೊತ್ತವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಪರಿಹಾರ ಪಡೆದುಕೊಳ್ಳಲು ನನಗೆ ಒಪ್ಪಿಗೆ ಇಲ್ಲ ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ನಮಗೆ ಒಪ್ಪಿಗೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ.1 ರಂತೆ ನಾನು ಪರಿಹಾರದ ಮೊತ್ತವನ್ನು ಪಡೆದುಕೊಂಡಾಗ ನನಗೆ ಒಪ್ಪಿಗೆ ಇಲ್ಲ ಎಂದು ಹೇಳಿ ದಾಖಲು ಮಾಡಿಸಿಲ್ಲ ಎಂದರೆ ಸಾಕ್ಷಿಯು ನಮಗೆ ಒಪ್ಪಿಗೆ ಇರಲಿಲ್ಲ ಎಂದು ನುಡಿಯುತ್ತಾರೆ.

ನಿಪಿ.2 ರಲ್ಲಿ ಜಿಲ್ಲಾಧಿಕಾರಿಯವರು ಪರಿಷ್ಕರಿಸಿದ ಪರಿಹಾರದ ಮೊತ್ತವನ್ನು ಪಾವತಿ ಮಾಡಲಾಗುತ್ತಿದೆ ಎಂದು ನಿಪಿ.2 ರಲ್ಲಿ ನಾನು ಯಾವುದೇ ವಿರೋಧ ವ್ಯಕ್ತಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದನ್ನು ನೋಡಿದ ನಂತರ ಜಿಲ್ಲಾಧಿಕಾರಿಯವರ ಆದೇಶವನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ನನಗೆ ವೈಜ್ಞಾನಿಕವಾಗಿ ಪರಿಹಾರ ನಿಗಧಿಪಡಿಸಿ ಪಾವತಿಸಿರುವುದರಿಂದ ನಾನು ಯಾವುದೇ ಹೆಚ್ಚುವರಿ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಸರ್ಕಾರ ನಿಗಧಿಪಡಿಸಿರುವ ಮಾರುಕಟ್ಟೆ ಮೌಲ್ಯಕ್ಕಿಂತ 5 ಪಟ್ಟು ಹೆಚ್ಚು ಪರಿಹಾರವನ್ನು ಎದರುದಾರರು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಜಮೀನು ಮಹಾನಗರಪಾಲಿಕೆಯ ವ್ಯಾಪ್ತಿಯ ಒಳಗೆ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ. ನನ್ನ ಜಮೀನು ಫಲವತ್ತತೆಯಿಂದ ಕೂಡಿರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ಕೊಟ್ಟಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

6 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ